**ಟೀಚರ್:** ನಿಮ್ಮ ಮಗನಿಗೆ ಟೀವಿಯಲ್ಲಿ ಬರೀ ಕ್ವಿಜ್ ತೋರಿಸಬೇಡಿ.
**ಗುಂಡನ ಅಪ್ಪ:** ಯಾಕೆ?
**ಟೀಚರ್:** ನಿಮ್ಮ ತಂದೆ ಹೆಸರು ಹೇಳೋ ಅಂದ್ರೆ, ನಾಲ್ಕು ಆಪ್ಷನ್ ಕೊಟ್ಟರೆ ಮಾತ್ರ ಹೇಳ್ತೀನಿ ಅಂತಾನೆ.

**ಹುಡುಗಿ:** ಮೊಬೈಲ್ ಸೂಪರ್ ಆಗಿದೆ. ಎಷ್ಟು ಕೊಟ್ಟೆ?
**ಗುಂಡ:** ರನ್ನಿಂಗ್ ರೇಸ್‌ನಲ್ಲಿ ಗೆದ್ದಿದ್ದು.
**ಹುಡುಗಿ:** ವಾವ್.. ಸೂಪರ್ ಎಷ್ಟು ಜನ ಸ್ಪರ್ಧಿಗಳಿದ್ದರು.
**ಗುಂಡ:** ಮೊಬೈಲ್ ಓನರ್, ನಾನು ಮತ್ತು ಪೊಲೀಸ್!

**ಅಪ್ಪ:** ಪರೀಕ್ಷೆ ಹೇಗಾಯ್ತೋ?
**ಗುಂಡ:** ತುಂಬಾ ಇಷ್ಟ ಆಯ್ತು ಮತ್ತೊಂದು ಸಲ ಬರಿಬೇಕು ಅನಿಸ್ತಿದೆ.

**ಗಂಡ:** ಡಾರ್ಲಿಂಗ್ ಇವತ್ತು ಹೋಟೆಲಿಗೆ ಹೋಗೋಣ.
**ಹೆಂಡತಿ:** (ಸಿಟ್ಟಿನಿಂದ) ಯಾಕೆ ನಾನು ಮಾಡೋ ಅಡುಗೆ ಅಷ್ಟು ಕೆಟ್ಟದಾಗಿರುತ್ತಾ?
**ಗಂಡ:** ಇಲ್ಲ ಕಣೆ. ಇವತ್ತು ಯಾಕೋ ಪಾತ್ರೆ ತೊಳೆಯೋ ಮೂಡ್ ಇಲ್ಲ ಅದಕ್ಕೆ.




ಮೂರು ಹೊತ್ತೂ A.C.ಲಿದ್ದಾನೆ...
ಈ ಗಾಳಿ ಅವನಿಗೆ ಆಗಿ ಬರಲ್ಲ...




**ಟೀಚರ್:** ಯಾಕೋ ಗುಂಡ, ನಾನು ಪಾಠ ಮಾಡುವಾಗ ದೇವರಲ್ಲಿ ಪ್ರಾರ್ಥನೆ ಮಾಡ್ತಿಯಾ?
**ಗುಂಡ:** ನಿದ್ದೆ ಬಂದಾಗ ದೇವರ ಪ್ರಾರ್ಥನೆ ಮಾಡು ಅಂತ ನಮ್ಮಮ್ಮ ಹೇಳ್ಕೊಟ್ಟಿದ್ದಾರೆ ಮೇಡಂ.

**ಡಾಕ್ಟರ್:** ಅಲ್ಲೋ, ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಿಲ್ಲ ಅಂತೀಯ. ಇಷ್ಟು ಬೇಗ ಈತ ಹೆಂಗ್ ಸತ್ತ?
**ಗುಂಡ:** ತಲೆಗೆ ವಿಷ ಏರಿತ್ತೋ ಏನೋ ಅಂತ ಭಯದಿಂದ ಕುತ್ತಿಗೆಗೆ ಬಿಗಿಯಾಗಿ ಹಗ್ಗ ಬಿಗಿದಿದ್ದೆ!

ಕ್ಲಬ್‌ನಲ್ಲಿ ಫೋನ್ ರಿಂಗಾಯಿತು. ಥಟ್ಟನೆ ರಿಸೀವ್ ಮಾಡಿದ ಅಟೆಂಡರ್!
**ಹೆಣ್ಣು ಧ್ವನಿ:** ನಮ್ ಯಜಮಾನ್ರು ಇದಾರಾ?
**ಅಟೆಂಡರ್:** ಇಲ್ಲ ಮೇಡಂ.
**ಹೆಣ್ಣು ಧ್ವನಿ:** ಅಸಲಿಗೆ ನಾನು ಯಾರ ಹೆಂಡ್ತಿ ಅಂತ ಗೊತ್ತಾ?
**ಅಟೆಂಡರ್:** ಅದರ ಅವಶ್ಯಕತೆ ಇಲ್ಲ. ಹೆಂಡ್ತಿ ಅಂತ ಹೇಳಿ ಯಾರೇ ಫೋನ್ ಮಾಡಿದ್ರೂ 'ಇಲ್ಲ' ಅಂತಷ್ಟೇ ಹೇಳುವಂತೆ ಆದೇಶವಿದೆ.

**ಅಮ್ಮ:** ಯಾಕೋ ಕಮ್ಮಿ ಅಂಕ ಬಂದಿದೆ?
**ಮಗ:** ಫೇಲಾದವರ ಪೈಕಿ ನನಗೇ ಹೆಚ್ಚು ಅಂಕ ಬಂದಿರೋದಮ್ಮ.

**ರಂಗಣ್ಣ:** ಅಲ್ಲಾ, ಈಗಿನ ಕಾಲದಲ್ಲಿ ಮನುಷ್ಯನಿಗೆ ಹಣಾನೆ ಮುಖ್ಯ ಆಗಿದೆ. ಏನಂತೀರಾ?
**ನಿಂಗಣ್ಣ:** ಉತ್ತರ ಹೇಳ್ತೀನಿ. ಮೊದ್ಲು ನನಗೆಷ್ಟು ಹಣ ಕೊಡ್ತೀರಾ ಅಂತ ಹೇಳಿ?

**ಅಪ್ಪ:** ಮಗನೇ ನಿನಗಾಗಿ ಒಂದು ಹುಡುಗಿ ನೋಡಿದ್ದೀನಿ. ಅವಳು ರೂಪದಲ್ಲಿ ರೂಪವತಿ, ಗುಣದಲ್ಲಿ ಗುಣವತಿ, ವಿದ್ಯೆಯಲ್ಲಿ ಸರಸ್ವತಿ.
**ಮಗ:** ಅಪ್ಪ ನಾನೊಂದು ಹುಡುಗಿಯನ್ನು ತುಂಬಾ ಪ್ರೀತಿಸುತ್ತಿದ್ದೇನೆ. ಅವಳ ಹೆಸರು 'ಶೇಕ್ ಇಟ್ ಪುಷ್ಪಾವತಿ'.

**ಭಿಕ್ಷುಕ:** ಅಮ್ಮಾ, ತಾಯಿ ಭಿಕ್ಷೆ ಕೊಡಿ. ನಾನು ಮೂಗ ನನಗೆ ಮಾತು ಬರೋದಿಲ್ಲ.
**ಗೃಹಿಣಿ:** ಮುಂದೆ ಹೋಗಪ್ಪಾ. ನಾನು ಕಿವುಡಿ ನನಗೆ ಕಿವಿ ಕೇಳಿಸೋದಿಲ್ಲ.

**ತಂದೆ:** ಮಗಳೇ ನಿನಗೆ ಯಾವ ತರಹದ ಗಂಡು ಬೇಕು?
**ಮಗಳು:** ತುಂಬಾ ತಾಳ್ಮೆ ಇರುವಂತಹ ಗಂಡು ಬೇಕಪ್ಪ.
**ತಂದೆ:** ಆರ್‌ಸಿ.ಬಿ ಫ್ಯಾನ್ ಆದ್ರೆ ಆಗುತ್ತೇನಮ್ಮಾ.

ಸಂಗ್ರಹ: ಶರದ ಕುಲಕರ್ಣಿ, ಬೀದರ್